ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 10.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 11, ಸ|| 1909.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟೋಲರವರು, ಪಬ್ಲಿಕ್‌ವರ್ಕ್ಸ್ ಅಫಿಸರಗಳು, ಫಾರೆಸ್ಟ್, ರಜಿಸ್ಟ್ರೇರ್ಷ ವ ಎಜ್ಯುಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರಿಟೆಂಡೆಂಟರು ಫಾರೆಸ್ಟ್ ಅಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇರ್ಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 20ನೆ ಫೆಬ್ರವರಿ 1909.

ನಂ. 8196—ಸ್ಯಾನಿಟೆರಿ 76-08—44, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇರ್ಷ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯು ವರ್ಷದ ಫೆಬ್ರವರಿ 10ನೆಯು ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ಕೆಸ್ತೂರಿ	...	...	...	ಎಳಂದೂರು.
ಬೂಚಹಳ್ಳಿ	...	...	...	ಡಿಟೋ
ಹೊನ್ನೂರು	...	...	...	ಡಿಟೋ
ಅಲಕೆರೆ ಅಗ್ರಹಾರ	...	...	...	ಡಿಟೋ
ಬ್ಯಾಡರಹಳ್ಳಿ	...	...	...	ಎಡತೊರೆ.
ಬೆಲ್ಲಹಳ್ಳಿ	...	...	...	ಡಿಟೋ
ಕನ್ನಗನಹಳ್ಳಿ	...	...	...	ಡಿಟೋ
ಹುವೆ	...	...	...	ಹುಣಸೂರು.
ಕಂಪಲಾಪುರ	...	...	...	ಡಿಟೋ
ಮಲ್ಲರಾಜಪಟ್ಣ	...	...	...	ಡಿಟೋ
ತಗಡೂರು	...	...	...	ನಂಜನಗೂಡು.
ಕರೀಹುಂಡಿ	...	...	...	ಡಿಟೋ
ಕುರುಬೂರು	...	...	...	ಟಿ. ನರಸೀಪುರ.
ಸೊರಬ	...	...	...	ಡಿಟೋ
ಬೂಕಿನಕೆರೆ	...	...	...	ಕೃಷ್ಣರಾಜಪೇಟೆ.

ತಾರೀಖು 1ನೆ ಮಾರ್ಚಿ 1909.

ನಂ. 8476—ಸ್ಯಾನಿಟೆರಿ 85-08-4, ಹಾಸನ ಡಿಸ್ಟ್ರಿಕ್ಟು ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳಕ್ಕೆ ಶ್ರೀ ಗೋಮಟೇಶ್ವರ ಸ್ವಾಮಿಯ ಮಸ್ತಕಾಭಿಷೇಕೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 2ನೆ ತಾರೀಖಿನಿಂದ 1909ನೆ ಏಪ್ರಿಲ್ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಮಾರ್ಚಿ 1909.

ನಂ. 8556—ಸ್ಯಾನಿಟೆರಿ 52—08—17, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
1. ವೈರವುಡಿ ಜಾತ್ರೆ ...	ಮೇಲ್ಕೋಟೆ ...	ಪಾಂಡವಪುರ ಸಬ್ ತಾಲ್ಲೂಕು.	24—3—09	5—4—09
2. ಶ್ರೀ ಶ್ರೀಕಂಠೇಶ್ವರಸ್ವಾಮಿ ರಥೋತ್ಸವ.	ನಂಜನಗೂಡು ...	ನಂಜನಗೂಡು.	27—3—09	5—4—09
3. ಶ್ರೀ ಗುಂಜಾ ನರಸಿಂಹಸ್ವಾಮಿ ರಥೋತ್ಸವ.	ಟಿ. ನರಸೀಪುರ ...	ಟಿ. ನರಸೀಪುರ.	2—4—09	4—4—09

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮತ್ ಮಹಾರಾಜರವರ ಸರ್ಕಾರದವರು ಪ್ರತಿ ಬಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 8ನೆ ಮಾರ್ಚಿ 1909.

ನಂ. 8703—ಸ್ಯಾನಿಟೆರಿ 61—08—74, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರ ಬ್ರಹ್ಮೋತ್ಸವ.	ಕದಿರಿ.	...	ಕಡಪ.	26—2—09	18—3—09	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಇಸವಿ ಫೆಬ್ರವರಿ 25ನೆ ಮಾರ್ಕುಂ 150ನೆ ಮೆಮೊ ಪ್ರಕಾರ.

ತಾರೀಖು 1ನೆ ಮಾರ್ಚಿ 1909.

ನಂ. 8474—ಸ್ಯಾನಿಟೆರಿ 42–08–5, ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಗ್ರಾಮಕ್ಕೆ ತಿಪ್ಪೆ ರುದ್ರನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಮಾರ್ಚಿ 10ನೆ ತಾರೀಖಿನಿಂದ 1909ನೆ ಮಾರ್ಚಿ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಪೇಲ್ಕುಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 2ನೆ ಮಾರ್ಚಿ 1909.

ನಂ. 8499—ಮೆಡಿಕಲ್ 163—08—5, 1907ನೆ ಇಸವಿ ನವಂಬರ್ 4ನೆ ತಾರೀಖಿನ 4018—ಮೆಡಿಕಲ್ 67—07—2ನೆ ನಂಬರು ಸರ್ಕಾರಿ ಇಸ್ತಿಹಾರ್‌ನಾಮೆ ಜತೆಗೆ, 1906ನೆ ಇಸವಿಯ Iನೆ ನಂಬರ್ ರೆಗ್ಯುಲೇಷನ್‌ನ 2ನೆ ಪ್ರಕರಣದ 1ನೆ ಕಲಂ ಅನುಸರಿಸಿ, ಈ ತಾರೀಖು ಲಾಗಾಯಿತು ಒಂದು ವರುಷದ ಪರಿಯಂತರ ಕೋಲಾರದ ಚಿನ್ನದ ಗಣಿಯ ಸ್ಯಾನಿಟೆರಿ ಬೋರ್ಡಿನವರ ಅಧಿಕಾರಕ್ಕೆ ವಳಪಟ್ಟ ಸ್ಥಳೀಕ ಪ್ರದೇಶದಲ್ಲಿ ಬಲಾತ್ಕಾರದಿಂದ ಕಿಡುಬು ಹಾಕಿಸತಕ್ಕದ್ದೆಂದು ಈ ಮೂಲಕ ಪ್ರಸಿದ್ಧಪಡಿಸಿರುತ್ತೆ.

ತಾರೀಖು 2ನೆ ಮಾರ್ಚಿ 1909.

ನಂ. 8508—ಮ್ಯು. 243—08—4, ಫವತಿಪಟ್ಟು ಮಿ|| ನಂಜುಂಡಕೆಟ್ಟಿ ಉರಫ್, ನಂಜುಂಡಯ್ಯನವರಿಗೆ ಬದಲಾಗಿ, ಮಿ|| ಪುಟ್ಟಸಾಮಿಕೆಟ್ಟಿ ಎಂಬ ವರ್ತಕರನ್ನು ತಿಪಟೂರು ಟರ್ನ ಮುನಿಸಿಪಲ್ ಬೋರ್ಡಿನ ಮೆಂಬರಾಗಿ ನೇಮಕ ಮಾಡಿರುತ್ತೆ.

ತಾರೀಖು 3ನೆ ಮಾರ್ಚಿ 1909.

ನಂ. ಜ್ಯು. 2530—ಕೋ. 279—08—2, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 357ನೆ ಪ್ರಕರಣವನ್ನನುಸರಿಸಿ ಚಿತ್ರದುರ್ಗ ಸಬ್ ಡಿವಿಜನ್ ಜಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮತ್ತು 1ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಟಿ. ಧರ್ಮರಾಜ ಚೆಟ್ಟಿಯವರು ಸಾಕ್ಷಿಗಳ ಹೇಳಿಕೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ತಮ್ಮ ಸ್ವಹಸ್ತದಿಂದ ಬರೆದುಕೊಳ್ಳಬೇಕೆಂದು ಹುಕುಂ ಮಾಡಿರುತ್ತದೆ.

ತಾರೀಖು 3ನೆ ಮಾರ್ಚಿ 1909.

ನಂ. ಜ್ಯು. 2539—ಕೋ. 272—08—4, 1904ನೆ ಇಸವಿಯ ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಪ್ರಕರಣಕ್ಕನುಸಾರವಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲಸನಮಾಡುವ ಅಸಿಸ್ಟೆಂಟ್ ಕಮಿಷನರ ಮತ್ತು 2ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಎಸ್. ಪಿ. ರಾಜಗೋಪಾಲಾಚಾರ್ಯವರನ್ನು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೊಕರೂರು ಮಾಡಿರುತ್ತದೆ. ಮತ್ತು ಸದರಿಯವರು ಅದೇ ಕೋಡಿನ 357ನೆ ಪ್ರಕರಣಕ್ಕನುಸಾರವಾಗಿ ಸಾಕ್ಷಿಗಳ ಹೇಳಿಕೆಗಳನ್ನು ತಮ್ಮ ಸ್ವಹಸ್ತದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದುಕೊಳ್ಳಬೇಕೆಂದು ಹುಕುಂ ಮಾಡಿರುತ್ತದೆ.

ತಾರೀಖು 5ನೆ ಮಾರ್ಚಿ 1909.

ನಂ. ಜ. 5037—ಜ. ಮಿ. 22—08—44, 1908ನೆ ಇಸವಿ ಡಿಸೆಂಬರ್ 4ನೆ ಮಾರ್ಕುಂಡ ಜ. 3405—ಜ. ಮಿ. 22—08—28ನೆ ನಂಬರು ಸರ್ಕಾರಿ ಇಸ್ತಿಹಾರ್‌ನಾಮೆಯ 3ನೆ ಪ್ಯಾರಾವನ್ನು ಬದಲಾಯಿಸಿ, ಮೈಸೂರು ಸಿವಿಲ್ ಸರ್ವಿಸ್ಸು ನಿಬಂಧನೆಗಳ ಪೈಕಿ 11ನೆ ನಿಬಂಧನೆಯ 2 (a) ಉಪಕಲಂ ಮತ್ತು XIನೆ ನಿಬಂಧನೆಯನ್ನನುಸರಿಸಿ, ಸಿ. ರಂಗನಾಥರಾವ್ ಸಾಹೇಬ್ ಬಿ. ಎ., ಬಿ. ಎಲ್., ರವರನ್ನು 1908ನೆ ಇಸವಿ ಡಿಸೆಂಬರ್ 17ನೆ ತಾರೀಖು ಲಾಗಾಯಿತು ಬಿ. ಷೆಡ್ಯೂಲಿನ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರನ್ನಾಗಿ ನೊಕರಮ್ಮಾಡಿ ಇದೆ.

ತಾರೀಖು 9ನೆ ಮಾರ್ಚಿ 1909.

ನಂ. ಜು. 2592—ಕೋರ್ಟ್ 280—08—2, ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಪ್ರಕರಣದ ಮೇರಿಗೆ, ಮೈಸೂರು ಚೀಫ್ ಕೋರ್ಟು ಡೆಪ್ಯುಟಿ ರಿಜಿಸ್ಟ್ರಾರ್ ಮಿ|| ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್., ರವರಿಗೆ ಪೂರಾ ತಲಬಿನಮೇಲೆ 1909ನೆ ಇಸವಿ ಮಾರ್ಚಿ 8ನೆ ತಾರೀಖು ಲಾಗಾಯಿತು 13 ದಿನಗಳ ಪ್ರಿವಿಲೇಜ್ ರಜಾವನ್ನು ಮಂಜೂರ್ಮಾಡಿ ಇದೆ.

ತಾರೀಖು 9ನೆ ಮಾರ್ಚಿ 1909.

ನಂ. ರೆ. 6995—ಲ್ಯಾ. ರೆ. 9—08—46, ಸ|| 1894ನೆಯ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ 6ನೆಯ ಪ್ರಕರಣವನ್ನು ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಸ್ವತ್ತು ಸರ್ಕಾರಿ ಕೆಲಸಕ್ಕೆ ಅಂದರೆ, ತುಮಕೂರು ಡಿಸ್ಟ್ರಿಕ್ಟು ಪಾವಗಡ ತಾಲ್ಲೂಕು ನಿಡಗಲ್ ಸ್ಟೇಟ್ ಫಾರೆಸ್ಟು ಖಾವಣೆ ಬಗ್ಗೆ ಅವಶ್ಯಕವಾಗಿದೆ. ಮತ್ತು ಸದರಿ

ರೆಗ್ಯುಲೇಷ್ಯ 3 (c) ಮತ್ತು 7ನೆ ಪ್ರಕರಣಗಳನ್ನು ಅನುಸರಿಸಿ ಮದ್ದಗಿರಿ ಸಬ್-ಡಿವಿಜ್ ಆಫಿಸರಿಗೆ ಸ್ವತ್ತನ್ನು ಪಡಿಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂ.	ತೆಗೆದುಕೊಳ್ಳುವ ಜಮೀನಿನ ತಪಶೀಲ್.	ಒಟ್ಟು ವಿಸ್ತೀರ್ಣ.		ಆಕಾರ.		ತೆಗೆದುಕೊಳ್ಳಬೇಕಾದ ಗಿರುವ ಜಮೀನು ವಿಸ್ತೀರ್ಣ.		ಚತುರ್ಗಡಿ.			
													ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
							ಎ.	ಗು.	ರೂ.	ಆ.	ಎ.	ಗು.				
ತುಮಕೂರು	ಪಾವಗಡ	ನಿಡಗಲ್	ನಿಡಗಲ್	ಲಕ್ಷ್ಮಮ್ಮ.	3	ಖುಷ್ಕ	25	24	10	0	25	24	ನಿಡಗಲ್ ಗ್ರಾಮದ ಸರ್ವೆ ನಂಬರ್ 2			
					4	,,	12	24	3	8	12	24				
					41	,,	20	38	5	0	20	38				
					42	,,	9	1	2	4	9	1				
						ಜುಮ್ಲಾ.	68	7	20	12	68	7				

ಹುಕುಂ ಬಮೋಜೇಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಟರಿ.